



# ಮನಮೋಹಕ ನಾಂಗ್ ನೂಚ್ ಉದ್ಯಾನ

■ ಕೆ.ಟಿ. ಜಯಶ್ರೀ

ಥಾಯ್ಲೆಂಡ್‌ನ ಪಟ್ಟಾಯದಲ್ಲಿರುವ 'ನಾಂಗ್ ನೂಚ್ ಟ್ರಾಪಿಕಲ್ ಬೊಟಾನಿಕಲ್ ಗಾರ್ಡನ್', ಸಾವಿರಾರು ಸಸ್ಯಸಂಕುಲವನ್ನೊಳಗೊಂಡ ಒಂದು ಮನಮೋಹಕ ತಾಣ.

ಸುಮಾರು 500 ಎಕರೆ ವಿಶಾಲ ವಿಸ್ತೀರ್ಣದಲ್ಲಿ ರೂಪುಗೊಂಡಿರುವ ಈ ಉದ್ಯಾನವನ್ನು 1980ರಲ್ಲಿ ನಾಂಗ್ ನೂಚ್ ಟಾನ್ಸಚ್ (**Nong nooch Tansacha**) ಎಂಬುವರು ಸ್ಥಾಪಿಸಿದ್ದು. ಅದಕ್ಕೇ ಈ ಉದ್ಯಾನಕ್ಕೂ ಅದೇ ಹೆಸರನ್ನಿಡಲಾಯಿತು.

ಆಗ್ನೇಯ ಏಷ್ಯಾದಲ್ಲಿಯೇ ಅತಿ ದೊಡ್ಡ ಬೊಟಾನಿಕಲ್ ಗಾರ್ಡನ್ ಎಂದು ಹೆಸರುವಾಸಿಯಾಗಿರುವ ಈ ಉದ್ಯಾನ, ಮೊದಲು ವಿದೇಶಿ ಹಣ್ಣುಗಳನ್ನು ಬೆಳೆಯುತ್ತಿದ್ದ ಪ್ರದೇಶವಾಗಿತ್ತು. ನಂತರ ಇದನ್ನು ಟ್ರಾಪಿಕಲ್ ಗಾರ್ಡನ್ ಮಾಡುವ ನಿರ್ಧಾರ ಮಾಡಿ ಹಂತಹಂತವಾಗಿ ರೂಪಿಸುತ್ತಾ ಬರಲಾಯಿತು. 1980ರಲ್ಲಿ ಮೊಟ್ಟ ಮೊದಲಿಗೆ ಸಾರ್ವಜನಿಕರಿಗೆ ಈ ಉದ್ಯಾನ ಮುಕ್ತವಾಯಿತು. ಇಲ್ಲಿ ರಾಪಿಸ್, ತಾಳೆ ಮರಗಳು, ಟಾರ್ಚ್ ಜಿಂಜರ್, ಹೆಲಿಕೊನಿಯ, ಬ್ರೊಮಿಲಿಯಾಡ್ಸ್ ಹೀಗೆ ಸಾಕಷ್ಟು ಸಸ್ಯಸಂಕುಲವಿದೆ.

ಪ್ರಮುಖವಾಗಿ ಸೈಕಾಡ್ ಸಸ್ಯದ ವೈಜ್ಞಾನಿಕ ಕೇಂದ್ರ ಇದಾಗಿದೆ. ಸೈಕಾಡ್‌ಗೆ ಕನ್ನಡದಲ್ಲಿ ಗೊಡ್ಡು ಈಚಲು ಎನ್ನುತ್ತಾರೆ. ಸೈಕಾಡ್ ಸಸ್ಯದ ಜೀನ್ ಬ್ಯಾಂಕ್ ಕೂಡ ಇಲ್ಲಿರುವುದು ವಿಶೇಷ. ಇಲ್ಲಿ ನಿರಂತರ ಸಂಶೋಧನೆ ಸಾಗಿದೆ.

ಈ ಉದ್ಯಾನವನದ ಪ್ರವೇಶ ದ್ವಾರದ ಹೊರಭಾಗದಲ್ಲಿ ಸುಮಾರು ಒಂದು ಕಿಲೋಮೀಟರ್‌ನಷ್ಟು ದೂರದಿಂದಲೇ ರಸ್ತೆಯ